ಅದನ್ನು ಈ ಸದನದ ಮುಂದೆ ಇಡಬೇಕು. ಅದು ನಮಗೆ ಗೊತ್ತಾಗಬೇಕು. ಈಗಾಗಲೇ ಹೆರಾಸ್‌ಮೆಂಟ್ ನಡೆದಿದೆ. ತಾವು ಕೊಟ್ಟ ಆದೇಶದ ವಿರುದ್ಧ ಅಧಿಕಾರಿಗಳು ಇವತ್ತಿನ ದಿವಸ ನಡೆದುಕೊಳ್ಳುತ್ತಿದ್ದಾರೆ.

ಶ್ರೀ ಶರಣ ಬಸಪ್ಪ ದರ್ಶನಾಪುರ್ (ಇಂದನ ರಾಜ್ಯ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಮೊನ್ನೆ ತಮ್ಮ ಕೊಠಡಿಯಲ್ಲಿ ನಡೆದ ವಿಷಯ ಈಗಾಗಲೇ ಎಲ್ಲ ಮಾನ್ಯ ಸದಸ್ಯರಿಗೆ ಗೊತ್ತಿದೆ. ಶಿವಮೊಗ್ಗದಲ್ಲಿ ಬೇರೆ ಕಡೆಯಲ್ಲಿ ಕಲೆಕ್ಟ್ ಮಾಡುತ್ತಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದರು, ಈಗಾಗಲೇ ನಮ್ಮ ಸರ್ಕಾರ ಈ ಕೆಇಬಿ ಇಲಾಖೆಯಿಂದ ಎಲ್ಲಾ ಕಡೆ ಸುತ್ತೋಲೆ ಕಳುಹಿಸಿದ್ದೇವೆ. ಅದು ಮುಟ್ಟುವುದಕ್ಕೆ ತಡವಾಗಿರಬಹುದು. ಒಂಥದ್ದು ಏನಾದರೂ ನಡೆದಿದ್ದರೆ ಇದನ್ನು ಸರಿಪಡಿಸಿ ಸರ್ಕಾರ ಏನು ನಿರ್ಣಯ ಕೊಟ್ಟಿದೆ, ಆ ನಿರ್ಣಯಕ್ಕೆ ಬದ್ಧರಾಗಿದ್ದೇವೆ, ಅದೇ ತರಹ ನಡೆದುಕೊಳ್ಳುತ್ತೇವೆಂದು ತಮ್ಮ ಮೂಲಕ ತಿಳಿಸುತ್ತೇನೆ.

ಶ್ರೀ ಎ. ರಾಮದಾಸ್ : ಕೆಲವು ಕಡೆ ಡಿಸ್‌ಕನೆಕ್ಟ್ ಮಾಡಿದ್ದಾರೆ. ಅವರು ಏನು ಹೇಳಿದ್ದಾರೆಂದರೆ ದುಡ್ಡು ಕಟ್ಟಿದರೂ ಪುನಃ ಡಿಸ್‌ಕನೆಕ್ಟ್ ಛಾರ್ಜ್ ಎಲ್ಲಾ ಕೊಡಬೇಕು ಎನ್ನುವಂತಹ ವಿಚಾರ ಬೆಳಕಿಗೆ ಬಂದಿದೆ. ಇದನ್ನು ಸರಿ ಮಾಡಬೇಕು ಎಂದು ತಮ್ಮ ಮೂಲಕ ಕೇಳುತ್ತಿದ್ದೇನೆ.

ಅಧ್ಯಕ್ಷರು : ಯಾವಾಗಲೂ ಕೂಡ ಒಂದು ಪ್ರಶ್ನೆ ಪ್ರಸ್ತಾಪ ಮಾಡಿದಾಗ, ಉತ್ತರ ಹೇಳಿದಾಗ ಆ ಮಾತಿನ ಹಿಂದೆ ಇರತಕ್ಕಂತಹ ಉದ್ದೇಶವನ್ನು ಅರ್ಥ ಮಾಡಿಕೊಳ್ಳಬೇಕು. ಮಾನ್ಯ ಮಂತ್ರಿಗಳು ಏನು ಹೇಳಿದರು, ಸರ್ಕಾರ ಏನು ನಿರ್ಣಯವನ್ನು ಇಲ್ಲಿ ಪ್ರಕಟಣೆ ಮಾಡಿದೆ, ಅಕ್ಷರಶಹ ನಾವು ಅದಕ್ಕೆ ಬದ್ಧರಾಗಿದ್ದೇವೆ, ಒಂದು ವೇಳೆ ಕಮ್ಯುನಿಕೇಷನ್ ಗ್ಯಾಪ ಆಗಿ ಅಲ್ಲಲ್ಲಿ ಏನಾದರೂ ಹೆಚ್ಚು ಕಡಿಮೆ ಆಗಿದ್ದರೆ, ಕೂಡಲೇ ನಾನು ಕಾರ್ಯೋನ್ಮುಖರಾಗಿ ಆ ಕೆಲಸ ಮಾಡಿ ಈ ಎಲ್ಲಾ ತೊಂದರೆ ನಿವಾರಣೆ ಮಾಡುತ್ತೇನೆಂದು ಹೇಳಿದ್ದಾರೆ; ದಯಮಾಡಿ ತಾವು ವಿಶ್ವಾಸ ಇಡಿ, ಅದರ ಮೇಲೆ ಅವರು ತೊಂದರೆ ಮಾಡಿದರೆ ನೋಡಿಕೊಳ್ಳೋಣ.

ಡಾ|| ಎಂ.ಪಿ. ಕರ್ಕಿ : ಅಧ್ಯಕ್ಷರೆ, ಡಿಸ್‌ಕನೆಕ್ಟ್ ಮಾಡಿದ್ದನ್ನು ಮತ್ತೆ ಕನೆಕ್ಷನ್ ಕೊಡಬೇಕಾದರೆ ದುಡ್ಡು ಕೊಡಬೇಕಾಗುತ್ತದೆ. ಈ ಡಿಸ್‌ಕನೆಕ್ಷನ್ ಏಕೆ ಮಾಡಿದ್ದರು ಎಂದು ಅವರು ವಿಚಾರ ಮಾಡುವುದಿಲ್ಲ. ನಿಮಗೆ ಕನೆಕ್ಷನ್ ಕೊಡುತ್ತಿದ್ದೇವೆ, ದುಡ್ಡು ಕೊಡಿ ಎಂದು ಕೇಳುತ್ತಾರೆ. ಅದಕ್ಕೆ ಸರ್ಕಾರ ಆದೇಶವನ್ನು ಕೊಡಬೇಕಾಗುತ್ತದೆ.

Mr. SPEAKER : Anyway he has made a note of it. ಈ ಕಾರಣಕ್ಕಾಗಿ ಡಿಸ್ ಕನೆಕ್ಟ್ ಮಾಡಿದ್ದಾರೆ, ನಾರ್ಮಲ್ ಕೋರ್ಸನಲ್ಲಿ ಅವರಿಗೂ ಇಂತಹ ರೀಕನೆಕ್ಷನ ಛಾರ್ಜಸ ಇಲ್ಲದಂತೆ ಮಾಡೋಣ. ತಾವು Mr. Kharge you have sought my permission to raise one matter.

(ಐ) ಬೀದರ್ ಜಿಲ್ಲೆಯ ವಕ್ಫ್ ಬೋರ್ಡ್ ಪ್ರಾಪರ್ಟಿ ಕುರಿತು.

ಶ್ರೀ ಸೈಯದ್ ಜುಲ್ಫಿಕಾರ್ ಹಶ್ಮಿ(ಬೀದರ್) : ಸನ್ಮಾನ್ಯ ಸಭಾಧ್ಯಕ್ಷರೆ, ನಮ್ಮ ಬೀದರ್ ಡಿಸ್ಟ್ರಿಕ್ಟ್‌ನಲ್ಲಿ ವಕ್ಫ್ ಬೋರ್ಡ್‌ನ ಪ್ರಾಪರ್ಟಿ ಏನು ಇದೆ, ಸರ್ಕಾರ ಮತ್ತು ಬೇರೆ ಜನ ಅದನ್ನು ಎನ್‌ಕ್ರೋಚ್‌ಮೆಂಟ್

ಮಾಡುತ್ತಿದ್ದಾರೆ. ಮೊನ್ನೆ 15 ದಿನಗಳ ಹಿಂದೆ, ಡಿಐಸಿ ಆಫೀಸ್‌ನವರು ಬಂದಾಗ ಅಲ್ಲಿ ಕ್ವಾಟ್ರಸ್ ಕಟ್ಟಿಸುವುದಕ್ಕೆ ಎಂದು ಹೇಳಿದರು. ಅಲ್ಲಿ ಮುಸ್ಲೀಂ ವರ್ಗ ಇತ್ತು, ಅದನ್ನೆಲ್ಲಾ ಕೆಡವಿದ್ದಾರೆ. ಒಂದು ಸಾರಿ ನಾನು ಡಿಸಿಯವರಿಗೆ ಕಂಪ್ಲೇಂಟ್ ಕೊಟ್ಟಿದ್ದೆ, ಮತ್ತು ಡಿಐಸಿ ಜನರಲ್ ಮ್ಯಾನೇಜರ್‌ಗೆ ಎಲ್ಲಾ ರೆಕಾರ್ಡ್ ತರಿಸಿಕೊಟ್ಟಿದ್ದೆ. ಕೊಟ್ಟ ಮೇಲೆ ಬೆಂಗಳೂರಿಗ ಬಂದ ಮೇಲೆ ನನ್ನ ಮೇಲೆ ಒಂದು ಕ್ರಿಮಿನಲ್ ಕೇಸ್ ಬುಕ್ ಮಾಡಿದ್ದಾರೆ. ಶಾಸಕರು ಬಂದು ನನಗೆ ಹೊಡೆದಿದ್ದಾರೆಂದು ಕೇಸ್ ಹಾಕಿದ್ದಾರೆ. ಸರ್ವೇ ನಂ. 31 ಡಿ ಅಂತ ಇದೆ ಅದು ಒಂದು ಎಕರೆ 20 ಗುಂಟೆ ವಕ್ಫ್ ಪ್ರಾಪರ್ಟಿ.

ಅಧ್ಯಕ್ಷರು : ಬಾಂಬೆಯಲ್ಲಿ ಸೆಂಟ್ರಲ್ ವಕ್ಫ್ ಕಮಿಟಿ ಮೀಟಿಂಗ್ ಇರುವುದರಿಂದ, ನನ್ನ ಅನುಮತಿ ಪಡೆದುಕೊಂಡು ಮಂತ್ರಿಗಳು ಬಾಂಬೆಗೆ ಹೋಗಿದ್ದಾರೆ. ಈ ವಿಚಾರದಲ್ಲಿ ನಾನು ಜವಾಬ್ದಾರಿ ತೆಗೆದುಕೊಳ್ಳುತ್ತೇನೆ. ರೋಶನ್ ಬೇಗ್‌ರವರು ಬಂದ ಮೇಲೆ ಅವರನ್ನು ಮತ್ತು ನಿಮ್ಮನ್ನು ಕರೆಸಿ ಅವರಿಗೆ ಈ ವಿಚಾರ ಹೇಳಿ ನಿಮಗೆ ಏನೂ ತೊಂದರೆಯಾಗದ ಹಾಗೆ ನಾನು ನೋಡಿಕೊಳ್ಳುತ್ತೇನೆ.

ಶ್ರೀ ಸೈಯದ್ ಜುಲ್ಫಿಕಾರ್ ಹಶ್ಮಿ: ಡಿಐಸಿಯವರು ಕೇಸ್‌ಬುಕ್‌ಮಾಡಿದ್ದಾರೆ. ಮೊಯುದ್ದೀನರವರಿಗೆ ಗೊತ್ತಿದೆ. ನಿಮ್ಮ ಡಿಪಾರ್ಟ್‌ಮೆಂಟ್‌ನವರೇ ಕೇಸ್ ಬುಕ್ ಮಾಡಿದ್ದಾರೆ. ಏಕೆ ಮಾಡಿದ್ದಾರೆಂದು ಅವರಿಗೆ ಕೇಳಿ ಎಂದು ಹೇಳಿದೆ. ಅವರು ಏನೂ ಕ್ರಮ ತೆಗೆದುಕೊಂಡಿಲ್ಲ. ಅವರಿಗೆ ಎಲ್ಲಾ ವಿಷಯ ಗೊತ್ತಿದೆ.

ಶ್ರೀ ಬಿ. ಎ. ಮೊಯ್ದೀನ್ : ಜಿಲ್ಲಾ ಕೈಗಾರಿಕಾ ಕೇಂದ್ರಗಳು ನನಗೆ ಬರುತ್ತವೆ. ಕ್ರಿಮಿನಲ್ ಕೇಸ್ ಏನು ಬುಕ್ ಮಾಡಿದ್ದಾರೆ, ಅದಕ್ಕೂ ನನಗೂ ಸಂಬಂಧವಿಲ್ಲ. ಗೋಕುಲಾಷ್ಟಮಿಗೂ ಇವರಿಗೂ ಏನು ಸಂಬಂಧವಿದೆಯೋ ಹಾಗೆ ಇದರಲ್ಲಿ ನನಗೂ ಅಷ್ಟೇ ಸಂಬಂಧ. ಆದರೂ ಕೂಡ ಇದು ಗಂಭೀರವಾದಂಥ ವಿಚಾರ. ಇವರ ಮೇಲೆ ಒಂದು ಕೇಸ್ ಬುಕ್ ಮಾಡಿದ್ದಾರೆ. ಇದರ ಬಗ್ಗೆ ತಾವೇ ಹೇಳಿದಹಾಗೆ ತಮ್ಮ ಜೊತೆಯಲ್ಲಿ ನಾನೂ ಇದ್ದೇನೆ. ನನ್ನ ಇಲಾಖೆಯಲ್ಲಿ ಅವರಿಗೆ ಏನು ಸಹಕಾರ ಆಗಬೇಕಾಗಿದೆ. ಅದನ್ನು ನಾನು ಮಾಡುತ್ತೇನೆ.

ಶ್ರೀ ಸೈಯದ್ ಜುಲ್ಫೀಕರ್ ಹಷ್ಮಿ : ಕ್ವಾರ್ಟರ್ಸ್ ಕಟ್ಟುತ್ತಿರುವುದನ್ನು ನಿಲ್ಲಿಸಬೇಕೆಂದು ತಮ್ಮ ಮೂಲಕ ಅವರಿಗೆ ನನ್ನ ವಿನಂತಿ ಇದೆ. ಅದು, ಅವರ ಡಿಪಾರ್ಟಮೆಂಟ್ ಕ್ವಾರ್ಟರ್ಸ್.

ಶ್ರೀ ಬಿ. ಎ. ಮೊಯ್ದೀನ್ : ಈಗಾಗಲೇ ನಿಲ್ಲಿಸಿದೆ. ಒಂದು ವೇಳೆ ಮಾನ್ಯ ಸದಸ್ಯರು ಹೇಳುವ ರೀತಿ ಇದ್ದರೆ, ಅದನ್ನು ನಿಲ್ಲಿಸುತ್ತೇನೆ.

ಶ್ರೀ ಸೈಯದ್ ಜುಲ್ಫೀಕರ್ ಹಷ್ಮಿ: ಆ ಆಫೀಸರ್ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಸ್. ರಾಜೇಂದ್ರನ್ : ಕ್ರಿಮಿನಲ್ ಕೇಸ್ ಬುಕ್ ಮಾಡುತ್ತಿದ್ದಾರೆಂದರೆ, ಶಾಸಕರು ಯಾರನ್ನೂ ಹೋಗಿ ಕೇಳಬೇಕು. ಅದೇ, ಅವರು ಕೇಳುತ್ತಾ ಇರುವುದು.

ಅಧ್ಯಕ್ಷರು : ಕೇಸ್ ವಿಚಾರದ ಬಗ್ಗೆ ರೋಷನ್ ಬೇಗ್ ಬರಲಿ ನಾನು ಮಾತನಾಡುತ್ತೇನೆ. ಬಹುಶಃ ಕನ್‌ಸ್ಟ್ರಕ್ಷನ್ ಬಗ್ಗೆ ಸ್ಟಾಪ್ ಮಾಡಿದೆ ಎಂದು ಮಂತ್ರಿಗಳು ಹೇಳುತ್ತಿದ್ದಾರೆ.

ಶ್ರೀ ಸೈಯದ್ ಜುಲ್ಫೀಕರ್ ಹುಷ್ಮಿ : ಏನಾದರೂ ಪಬ್ಲಿಕ್ ಪ್ರಾಪರ್ಟಿಗೆ ಡ್ಯಾಮೇಜ್ ಆದಾಗ, ನಾವು ದೂರು ಕೊಟ್ಟರೆ, ಸರ್ಕಾರದಲ್ಲಿ ವಿನಂತಿ ಮಾಡಿದರೆ, ನಮ್ಮ ಮೇಲೆಯೇ ಕೇಸ್ ಬುಕ್ ಮಾಡುತ್ತಾರೆ. ಈ ರೀತಿಯಾದರೆ ನಮ್ಮ ಕ್ಷೇತ್ರದಲ್ಲಿ ನಾವು ಹೇಗೆ ಕೆಲಸ ಮಾಡಬೇಕು? ಮುಸ್ಲೀಂ ಸಮಾಜದ್ದು ಒಂದೇ ಒಂದು ವಕ್ಫ್ ಪ್ರಾಪರ್ಟಿ ಅದನ್ನೂ ನಮಗೆ ಈ ಸರ್ಕಾರದವರು ಬಿಡುತ್ತಿಲ್ಲವೆಂದರೆ ನಾವೇನು ಮಾಡಬೇಕು? ಇದು ಸರ್ಕಾರದಿಂದ ಆಗುತ್ತಾ ಇದೆ, ಬೇರೆಯವರಿಂದ ಇದು ಆಗುತ್ತಾ ಇಲ್ಲ.

ಅಧ್ಯಕ್ಷರು : ಆಯಿತು. ಅದೇನೂ ತೊಂದರೆಯಾಗದಂತೆ ನೋಡಿಕೊಳ್ಳುತ್ತಾರೆ.

ಶ್ರೀ ಬಿ. ಬಿ. ಶಿವಪ್ಪ : ದಶಲಕ್ಷಬಾವಿ ಯೋಜನೆ ಬಗ್ಗೆ ಆಗಿರತಕ್ಕ ಅವ್ಯವಹಾರದ ಬಗ್ಗೆ ಪ್ರಸ್ತಾಪ ಮಾಡಿದ್ದೆವು ....

ಅಧ್ಯಕ್ಷರು : ಇದು ಆಗಲಿ. ಆಮೇಲೆ ನೀವು ಮಾತನಾಡಿ. ಸರ್ಕಾರದ ಪರವಾಗಿ ಅವರು 3-4 ವಿಚಾರಗಳಲ್ಲಿ ಸ್ಟೇಟ್‌ಮೆಂಟ್ ಮಾಡಬೇಕಾಗಿದೆ. ಇದನ್ನು ಮುಗಿಸಿ, ಮುಖ್ಯಮಂತ್ರಿಗಳ ಉತ್ತರ ಆದಮೇಲೆ ಕೊನೆಯಲ್ಲಿ ಸ್ಟೇಟಮೆಂಟು ಮಾಡಿಸೋಣ.

ಶ್ರೀ ಬಿ. ಬಿ. ಶಿವಪ್ಪ : ಹಾಸನದಲ್ಲಿ ದಶಲಕ್ಷಬಾವಿ ಯೋಜನೆ ವಿಚಾರದಲ್ಲಿ ಸಾಕಷ್ಟು ಅವ್ಯವಹಾರ ನಡೆದಿದೆ ಎಂಬುದನ್ನು ತಮ್ಮ ಗಮನಕ್ಕೆ ತಂದಿರುತ್ತೇವೆ.

(ಓ) ಹಾಸನದಲ್ಲಿ ಜಲಾನಯನ ಅಭಿವೃದ್ಧಿ ಯೋಜನೆ ಕುರಿತು.

ಶ್ರೀ ಬಿ. ಶಿವರಾಮ್ (ಗಂಡಸಿ) : ಅಧ್ಯಕ್ಷರೆ, 1993-94, 1994-95 ಮತ್ತು 1995-96ರಲ್ಲಿ ಇ.ಎ.ಎಸ್. ಹಣ ಮತ್ತೆ ಜಲಾನಯನ ಅಭಿವೃದ್ಧಿ ಯೋಜನೆ ಹಣ, ದಶಲಕ್ಷಬಾವಿ ಯೋಜನೆ, ಈ ಸ್ಕೀಮಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೋಟಿಗಟ್ಟಲೆ ಹಣವನ್ನು ಕೊಟ್ಟಿದ್ದಾರೆ. ಮಂತ್ರಿಗಳು ಹಾಸನ ಜಿಲ್ಲೆಗೆ ಬಂದಾಗ ಅರಕಲಗೂಡು, ಬೇಲೂರು, ಸಕಲೇಶಪುರ ಮತ್ತು ಹಾಸನ ಬಗ್ಗೆ ವಿಚಾರಣೆ ಮಾಡಿ ಕೆಲವು ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದರು. ವಾಸ್ತವಿಕವಾಗಿ ನಾನು ಅದನ್ನು ಚರ್ಚೆ ಮಾಡಬೇಕೆಂದು ತಮ್ಮ ಅನುಮತಿ ಪಡೆದಿದ್ದೆ. ಆದರೆ ಸಚಿವರು ಇಲ್ಲದೇ ಇದ್ದಾಗ ಅದನ್ನು ಮಾತನಾಡುವುದು ಬೇಡ ಎಂದು ಸಹಕಾರ ಇಲಾಖೆಯ ಬಗ್ಗೆ ಕೇಳಿದೆ. ಈಗ ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ. ಅವರಿಗೆ ದುರುಪಯೋಗವಾಗಿದೆ ಎಂಬುದು ಗೊತ್ತಾಗಿದೆ. ಸಾಕಷ್ಟು ಕಾಮಗಾರಿಗಳೇ ಆಗಿಲ್ಲ. ಇರತಕ್ಕಂತಹ ಕಾಮಗಾರಿಗಳಲ್ಲಿ ಗುಣಮಟ್ಟ ಇಲ್ಲ. ಸಮರ್ಪಕವಾಗಿ ಅನುಷ್ಠಾನಕ್ಕೆ ಬಂದಿಲ್ಲ. ಈಗ ಕೆಲವರು ಉಪಕರಣಗಳನ್ನು ತೆಗೆದುಕೊಂಡು ಹೋಗಿ ಕೆಲಸ ಮಾಡುತ್ತಿದ್ದಾರೆ. ಇದು 1993-94ನೇ ಇಸವಿಯಲ್ಲಿ ಆ ಜಿಲ್ಲೆಯಲ್ಲಿ ನಡೆದಿರತಕ್ಕಂಥ ದುರಂತ. ನಿಮ್ಮ ಕಾಲದಲ್ಲಿ ಏನು ಮಾಡಿದ್ದೀರಿ ಎನ್ನುವ ಪ್ರಶ್ನೆ ಅಲ್ಲ, ಏಕೆಂದರೆ ಅದು ಗಮನಕ್ಕೆ ಬಂದಿದ್ದು ಈಗ. ಅವರು ಕೆಲವು ಅಧಿಕಾರಿಗಳನ್ನು ಕಳಿಸಿ ವಿಚಾರಣೆ ಮಾಡುವುದಕ್ಕೆ ಶುರು ಮಾಡಿದ ಮೇಲೆ ಎಷ್ಟು ಕೆಲಸವಾಗಿದೆ ಎನ್ನತಕ್ಕಂಥ ವಿಚಾರ. ಅದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ. ಈಗಾಗಲೇ ಕೆಲಸ, ಮಾಡುತ್ತಿರುವ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರೋ, ಎಷ್ಟು ಹಣ ದುರುಪಯೋಗವಾಗಿದೆ, ಏನಾಗಿದೆ ಎಂಬುದನ್ನು ಸಚಿವರಲ್ಲಿ ಕೇಳಬೇಕೆಂದೇ ತಮ್ಮ ಅನುಮತಿಯನ್ನು ಪಡೆದಿದ್ದು ಅದು ಏನಾಯಿತೆಂದರೆ ಅವರು ಇರಲಿಲ್ಲ,